**All India Radio: Bangalore**
**National Bulletin In Kannada**
**07.07.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**07.07.2025 1.10 p.m.**

**<><><><>**

**ಮುಖ್ಯಾಂಶಗಳು**

೧. ಜಾಗತಿಕ ಆಡಳಿತ ಸಂಸ್ಥೆಗಳಲ್ಲಿ ಸುಧಾರಣೆ ತರಲು ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಕರೆ

೨. ಬ್ರಿಕ್ಸ್‌ನ ಅಮೆರಿಕ ವಿರೋಧಿ ನೀತಿಗಳನ್ನು ಅನುಸರಿಸುವ ರಾಷ್ಟ್ರಗಳಿಗೆ ಹೆಚ್ಚುವರಿ ಸುಂಕ ವಿಧಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ

೩. ಏಷ್ಯನ್ ಪ್ಯಾರಾ ಬಿಲ್ಲುಗಾರಿಕೆ ಚಾಂಪಿಯನ್ ಶಿಪ್ ; ಭಾರತಕ್ಕೆ ಮೂರು ಚಿನ್ನದ ಪದಕ

೪. ವಿಶ್ವ ಬಾಕ್ಸಿಂಗ್ ಕಪ್ ; ಭಾರತದ ಮೂವರು ವನಿತೆಯರಿಗೆ ಸ್ವರ್ಣ ಪದಕ

**><><><><><><><><><><**

ಎರಡು ದಿನಗಳ ಬ್ರಿಕ್ಸ್ ಶೃಂಗಸಭೆ ಅತಿವೇಗವಾಗಿ ಬದಲಾಗುತ್ತಿರುವ ಜಾಗತಿಕ ಬೆಳವಣಿಗೆಗಳ ಸಂದರ್ಭದಲ್ಲಿ ಪ್ರಾಮುಖ್ಯತೆ ಪಡೆದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಆರ್ಥಿಕ ಸಂಬಂಧಗಳ ಕಾರ್ಯದರ್ಶಿ ದಮ್ಮುರವಿ ತಿಳಿಸಿದ್ದಾರೆ. ರಿಯೊಡಿ ಜೆನ್ಯೆರೊದಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಮುಂದಿನ ವರ್ಷ ಭಾರತ ಬ್ರಿಕ್ಸ್ ಶೃಂಗಸಭೆ ಅಧ್ಯಕ್ಷತೆ ವಹಿಸಲಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಈ ಭೇಟಿ ಮಹತ್ವ ಪಡೆದಿದೆ. ೨೦ನೇ ಶತಮಾನದ ಜಾಗತಿಕ ಒಕ್ಕೂಟಗಳು, ೨೧ನೇ ಶತಮಾನದ ಸವಾಲುಗಳನ್ನು ಎದುರಿಸಲು ಸಮರ್ಥವಿಲ್ಲ. ಆದ್ದರಿಂದ ಬಹು ರಾಷ್ಟ್ರೀಯ ಸಂಸ್ಥೆಗಳನ್ನು ಮರು ರೂಪಿಸುವುದು ಅಗತ್ಯವಿದೆ ಎಂದು ತಿಳಿಸಿದರು. ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಬಹು ಧ್ರುವೀಕೃತ ಎಲ್ಲರನ್ನೊಳಗೊಳ್ಳುವ ಜಾಗತಿಕ ವ್ಯವಸ್ಥೆಗಾಗಿ ಕರೆ ನೀಡಿದ್ದು, ವಿಶ್ವಸಂಸ್ಥೆ ಭದ್ರತಾ ಮಂಡಳಿ, ಅಂತಾರಾಷ್ಟ್ರೀಯ ಹಣಕಾಸು ಒಕ್ಕೂಟ,

ವಿಶ್ವ ಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆ - ಡಬ್ಲ್ಯುಟಿಒ ಸೇರಿದಂತೆ ಜಾಗತಿಕ ಆಡಳಿತ ಸಂಸ್ಥೆಗಳು ಇಂದಿನ ಜಾಗತಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ತ್ವರಿತ ಸುಧಾರಣೆಗೆ ಒಳಗಾಗಬೇಕು ಎಂದು ಕರೆ ನೀಡಿರುವುದಾಗಿ ವಿದೇಶಾಂಗ ಕಾರ್ಯದರ್ಶಿ ಮಾಹಿತಿ ನೀಡಿದರು. ಅದೇ ವೇಳೆ ವಿಜ್ಞಾನ ಮತ್ತು ಸಂಶೋಧನಾ ದತ್ತಾಂಶ ಕೇಂದ್ರವನ್ನು ಸ್ಥಾಪಿಸುವ ಕುರಿತಂತೆ ಕೆಲವು ಸಲಹೆಗಳನ್ನು ಪ್ರಧಾನಿ ಪ್ರಸ್ತಾಪಿಸಿದರು. ಪಹಲ್ಗಾಮ್ ದಾಳಿ ಕುರಿತಂತೆ ಎಲ್ಲಾ ಸದಸ್ಯ ರಾಷ್ಟ್ರಗಳು ಭಾರತದೊಂದಿಗೆ ಒಗ್ಗಟಾಗಿ ನಿಂತು ದಾಳಿಯನ್ನು ತೀವ್ರವಾಗಿ ಖಂಡಿಸಿವೆ ಎಂದು ಕಾರ್ಯದರ್ಶಿ ದಮ್ಮುರವಿ ತಿಳಿಸಿದರು.

ಧ್ವನಿ : ದಮ್ಮುರವಿ (೨೨ ಸೆಕೆಂಡ್‌ಗಳು)

><><><><><><><><><><><

ಬ್ರಿಕ್ಸ್‌ನ ಅಮೆರಿಕ ವಿರೋಧಿ ನೀತಿಗಳಿಗೆ ಒಮ್ಮತ ಸೂಚಿಸಿ ಅನುಷ್ಠಾನಗೊಳಿಸುವ ದೇಶಗಳ ಮೇಲೆ ಹೆಚ್ಚುವರಿ ಶೇಕಡ ೧೦ ರಷ್ಟು ಆಮದು ಸುಂಕ ವಿಧಿಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಹೇಳಿಕೆ ನೀಡಿರುವ ಅವರು, ಈ ನೀತಿಯ ಬಗ್ಗೆ ಯಾವುದೇ ರೀತಿಯ ವಿನಾಯಿತಿ ಇಲ್ಲ ಎಂದು ಹೇಳಿದ್ದಾರೆ. ಬ್ರಿಕ್ಸ್ ಶೃಂಗಸಭೆಯಲ್ಲಿ ಅಮೆರಿಕದ ಆಮದು ಸುಂಕ ಏರಿಕೆ ನೀತಿಯನ್ನು ಬ್ರಿಕ್ಸ್ ರಾಷ್ಟ್ರಗಳು ಖಂಡಿಸಿದ್ದು, ಇದರ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ. ಬ್ರಿಕ್ಸ್ ಸಭೆಯ ವೇಳೆ ಇರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ದಾಳಿಯ ಕುರಿತು ಸದಸ್ಯ ರಾಷ್ಟ್ರಗಳು ಖಂಡನೆ ವ್ಯಕ್ತಪಡಿಸಿವೆ. ಈ ನಡುವೆ ವಿವಿಧ ರಾಷ್ಟ್ರಗಳೊಂದಿಗೆ ಅಮೆರಿಕದ ಸುಂಕ ಪತ್ರಗಳನ್ನು ಮತ್ತು ಇತರ ಒಪ್ಪಂದಗಳನ್ನು ಇಂದಿನಿಂದ ವಿತರಿಸಲಾಗುವುದು ಎಂದು ಅಧ್ಯಕ್ಷ ಟ್ರಂಪ್ ಘೋಷಿಸಿದ್ದಾರೆ. ನಾಡಿದ್ದು, ೯೦ ದಿನಗಳ ಹೆಚ್ಚುವರಿ ಸುಂಕ ವಿರಾಮ ಮುಕ್ತಾಯವಾಗಲಿದ್ದು, ಹೊಸ ಸುಂಕ ನೀತಿ ಜಾರಿಗೆ ಬರಲಿದೆ.

><><><><><><><><><><

ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಗಳ ನಡುವೆ  ಜಮ್ಮುವಿನಿಂದ ಹೊರಟಿರುವ ೬ನೇ ಬ್ಯಾಚ್‌ನ ೮ ಸಾವಿರದ ೬೦೫ ಅಮರನಾಥ್ ಯಾತ್ರಾರ್ಥಿಗಳ ಮತ್ತೊಂದು ತಂಡ ಭಗವತಿ ನಗರ ಯಾತ್ರಿನಿವಾಸ್ ಮೂಲಶಿಬಿರದಿಂದ ಅಮರನಾಥ್ ಗುಹೆ ದೇಗುಲಕ್ಕೆ ಪ್ರಯಾಣ ಬೆಳೆಸಿತು.

><><><><><><><><><><

ಕೇರಳ ಪ್ರವಾಸದಲ್ಲಿರುವ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರು, ಕೊಚ್ಚಿಯಲ್ಲಿರುವ ರಾಷ್ಟ್ರೀಯ ಉನ್ನತ ಕಾನೂನು ವಿಶ್ವ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೊಂದಿಗೆ ಸಂವಾದ ನಡೆಸಿದರು.

><><><><><><><><><><

೧೯೯೯ರ ಕಾರ್ಗಿಲ್ ಯುದ್ಧದಲ್ಲಿ ವೀರ ಮರಣ ಹೊಂದಿದ ಕ್ಯಾಪ್ಟನ್ ವಿಕ್ರಮ್ ಬಾತ್ರಾ ಅವರನ್ನು ಅವರ ಪುಣ್ಯ ಸ್ಮರಣೆ ದಿನವಾದ ಇಂದು ದೇಶ ಸ್ಮರಿಸುತ್ತಿದೆ.  ಕಾರ್ಗಿಲ್ ಯುದ್ಧದ ವೇಳೆ ತಮ್ಮ ತುಕಡಿಯ ನೇತೃತ್ವ ವಹಿಸಿದ್ದ ಕ್ಯಾಪ್ಟನ್ ವಿಕ್ರಂ ಬಾತ್ರಾ ಕಾರ್ಯತಂತ್ರದ ದೃಷ್ಟಿಯಲ್ಲಿ ಪ್ರಮುಖವಾಗಿದ್ದ ಪಾಯಿಂಟ್ ೫೧೪೦ ವನ್ನು ಯಶಸ್ವಿಯಾಗಿ ವಶಪಡಿಡಿಕೊಂಡರು. ಈ ವೇಳೆ ಅವರು, ಅಸಮಾನ್ಯ ಶೌರ್ಯ ತೋರಿ ಎದುರಾಳಿ ಸೈನಿಕರನ್ನು ನಿಯಂತ್ರಿಸುವಲ್ಲಿ ಸಫಲರಾದರು. ಇದರ ಬಳಿಕ ಪಾಯಿಂಟ್ ೪೮೭೫ ರ ಬಳಿ ನಡೆದ ಮತ್ತೊಂದು ಕಾರ್ಯಾಚರಣೆಯನ್ನು ಅಸಾಧ್ಯ ಯೋಜನೆಯನ್ನು ಸಾಧ್ಯವಾಗಿಸಿದ ಶ್ರೇಯಸ್ಸು ಕ್ಯಾಪ್ಟನ್ ಬಾತ್ರಾ ಅವರಿಗೆ ಸಲ್ಲಿಸುತ್ತದೆ. ಈ ವೇಳೆ ಅವರು, ದಾಳಿಯ ನೇತೃತ್ವ ವಹಿಸಿ ೫ ಎದುರಾಳಿ ಸೈನಿಕರನ್ನು ನಿಯಂತ್ರಣಕ್ಕೆ ತರುವಲ್ಲಿ ಸಫಲರಾದರು. ಇಡೀ ಕಾರ್ಯಾಚರಣೆಯಲ್ಲಿ ಅವರು ತೋರಿದ ಧೈರ್ಯ, ಶೌರ್ಯ ಹಾಗೂ ಒಟ್ಟಾರೆ ಯುದ್ಧಕ್ಕೆ ನೀಡಿದ ಕೊಡುಗೆಗಾಗಿ ಅವರಿಗೆ ಮರಣೋತ್ತರವಾಗಿ ಪರಮವೀರ್ ಚಕ್ರ್ ನೀಡಿ ಗೌರವಿಸಲಾಗಿದೆ. ಕ್ಯಾಪ್ಟನ್ ಬಾತ್ರಾ ಅವರನ್ನು ಸ್ಮರಿಸಿರುವ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬಾತ್ರಾ ಅವರು ತೋರಿದ ಅಸಮಾನ್ಯ ಶೌರ್ಯ ಮತ್ತು ಕಾರ್ಗಿಲ್ ಯುದ್ಧದ ವೇಳೆ ಗೈದ ತ್ಯಾಗ ರಾಷ್ಟ್ರ ಸೇವೆಯಲ್ಲಿ ಧೈರ್ಯ ಮತ್ತು ಪರಾಕ್ರಮದ ಒಂದು ಉದಾಹರಣೆಯಾಗಿದೆ ಎಂದು ತಿಳಿಸಿದ್ದಾರೆ.

><><><><><><><><><><

ನಾಗಾಲ್ಯಾಂಡ್‌ನಲ್ಲಿ, ನಿರಂತರ ಮಳೆಯಿಂದ ಹಾನಿ ಉಂಟಾಗುತ್ತಿದ್ದು, ವಿದ್ಯುತ್ ಆಘಾತದಿಂದ ಕನಿಷ್ಠ ಮೂವರು ಸಾವನ್ನಪ್ಪಿದ್ದಾರೆ. ನಿನ್ನೆ ದಿಮಾಪುರದ ಕುಡಾ ಗ್ರಾಮದಲ್ಲಿ ಇಬ್ಬರು ಸಾವನ್ನಪ್ಪಿ, ಪೊಲೀಸ್ ಕಾಲೋನಿಯಲ್ಲಿ ನೀರು ತುಂಬಿದ್ದ ಇನ್ವರ್ಟರ್ ಸಂಪರ್ಕ ಕಡಿತಗೊಳಿಸಲು ಪ್ರಯತ್ನಿಸುವಾಗ ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ. ವಾರಾಂತ್ಯದಲ್ಲಿ ಸುರಿದ ಭಾರೀ ಮಳೆಯಿಂದಾಗಿ ಹಲವಾರು ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದು, ಅನೇಕ ನಿವಾಸಿಗಳು ತಮ್ಮ ಮನೆಗಳನ್ನು ಸ್ಥಳಾಂತರಿಸಲಾಗಿದೆ. ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿ ದೋಣಿಗಳನ್ನು ಹೊಂದಿದ್ದು, ಸಿಕ್ಕಿಬಿದ್ದ ನಿವಾಸಿಗಳನ್ನು ರಕ್ಷಿಸಲು ಮತ್ತು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಕೆಲಸ ಮಾಡುತ್ತಿದ್ದಾರೆ. ಭಾರತೀಯ ಹವಾಮಾನ ಇಲಾಖೆಯ ಪ್ರಕಾರ, ನಾಗಾಲ್ಯಾಂಡ್‌ನಲ್ಲಿ ಸಾಮಾನ್ಯ ಮಟ್ಟಕ್ಕಿಂತ ಶೇ ೩೯೩ ರಷ್ಟು ಹೆಚ್ಚಿನ ಮಳೆಯಾಗಿದೆ.

><><><><><><><><><><

ಇಸ್ರೇಲ್ ಕಳೆದ ರಾತ್ರಿ ಪಶ್ಚಿಮ ಹೌದೈದಾ ಪ್ರಾಂತ್ಯದಲ್ಲಿರುವ ಯೆಮೆನ್‌ನ ಕೆಂಪು ಸಮುದ್ರ ಬಂದರುಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ. ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕಾಟ್ಸ್, ಈ ದಾಳಿಗಳನ್ನು ಹೌತಿಯ ಪ್ರಮುಖ ತಾಣಗಳನ್ನು ಗುರಿಯಾಗಿಸಿ ನಡೆಸಲಾಗಿದೆ ಎಂದು ಹೇಳಿದ್ದಾರೆ. ಈ ತಾಣಗಳನ್ನು ಹೌತಿ ಸಂಘಟನೆ ಶಸ್ತ್ರಾಸ್ತ್ರ ಸಾಗಣೆ ಮತ್ತು ಇಸ್ರೇಲ್ ಮತ್ತು ಮಿತ್ರ ರಾಷ್ಟ್ರಗಳ ಮೇಲೆ ಭಯೋತ್ಪಾದಕ ಕಾರ್ಯಾಚರಣೆ ನಡೆಸಲು ಬಳಸಿಕೊಳ್ಳುತ್ತಿತ್ತು.

><><><><><><><><><><

ಬಿಜಿಂಗ್‌ನಲ್ಲಿ ನಡೆದ ಏಷ್ಯನ್ ಪ್ಯಾರಾ ಬಿಲ್ಲುಗಾರಿಕೆ ಚಾಂಪಿಯನ್ ಶಿಪ್‌ನಲ್ಲಿ ವಿಶ್ವ ಅಗ್ರ ಶ್ರೇಯಾಂಕಿತ ಹಾಗೂ ಪ್ಯಾರಾ ಒಲಿಂಪಿಕ್ ಚಾಂಪಿಯನ್ ಭಾರತದ ಹರವಿಂದರ್ ಸಿಂಗ್ ೨ ಚಿನ್ನದ ಪದಕ ಜಯಿಸಿದ್ದಾರೆ. ಹರವಿಂದರ್ ಸಿಂಗ್ ರಿಕರ್ವ್ ಪುರುಷರ ಅರ್ಹತಾ ಸುತ್ತಿನ ಪಂದ್ಯದಲ್ಲಿ ೬೬೩ ಅಂಕಗಳನ್ನು ಗಳಿಸಿ ನೂತನ ಕೂಟ ದಾಖಲೆ ನಿರ್ಮಿಸಿದರು. ಅವರು, ಮಿಶ್ರ ವಿಭಾಗದಲ್ಲಿ ಭಾರತದವರೇ ಆದ ಭಾವನಾ ಜೊತೆಗೂಡಿ ಮಿಶ್ರ ಡಬಲ್ಸ್ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಇದರ ಜೊತೆಗೆ ರಿಕರ್ವ್ ಪುರುಷರ ಮುಕ್ತ ವಿಭಾಗದಲ್ಲೂ ಸ್ವರ್ಣ ಪದಕಕ್ಕೆ ಕೊರಳೊಡ್ಡಿದರು. ಭಾರತದ

ಶೀಥಲ್ ದೇವಿ ಮತ್ತು ಜ್ಯೋತಿ ಅವರನ್ನೊಳಗೊಂಡ ಮಹಿಳಾ ಕಂಪೌಂಡ್ ತಂಡ ಚೀನಾದ ಲು ಜ್ಯಾಂಗ್ ಮತ್ತು ಜಿಂಗ್ ಜಾವೊ ಜೋಡಿಯನ್ನು ಮಣಿಸಿ ಭಾರತಕ್ಕೆ ಮತ್ತೊಂದು ಚಿನ್ನದ ಪದಕ ತಂದುಕೊಟ್ಟರು. ಆ ಮೂಲಕ ಪದಕ ಪಟ್ಟಿಯಲ್ಲಿ ಭಾರತ ೨ನೇ ಸ್ಥಾನಕ್ಕೇರಲು ಸಹಕರಿಸಿದ್ದಾರೆ. ಪಂದ್ಯಾವಳಿಯಲ್ಲಿ ಒಟ್ಟಾರೆ ಭಾರತ ೩ ಚಿನ್ನ, ೩ ಬೆಳ್ಳಿ, ೩ ಕಂಚಿನ ಪದಕಗಳನ್ನು ಪಡೆದಿದೆ.

><><><><><><><><><><

ಕಜಕಿಸ್ತಾನ್ ಆಸ್ಥಾನದಲ್ಲಿ ನಡೆದ ವಿಶ್ವ ಬಾಕ್ಸಿಂಗ್ ಕಪ್ ಪಂದ್ಯಾವಳಿಯಲ್ಲಿ ಭಾರತೀಯ ವನಿತೆಯರಾದ ಜೈಸ್ಮೀನ್ ಲಂಬೋರಿಯಾ, ಸಾಕ್ಷಿ ಮತ್ತು ನೂಪುರ್ ತಮ್ಮ ತಮ್ಮ ವಿಭಾಗದಲ್ಲಿ ಸ್ವರ್ಣ ಪದಕ ಗೆದ್ದುಕೊಂಡಿದ್ದಾರೆ. ೫೭ ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಜೈಸ್ಮೀನ್ ಲಂಬೋರಿಯಾ, ಬ್ರೆಜಿಲ್‌ನ ಜ್ಯೂಸಿಲೆನ್ ರೋಮಿಯು ವಿರುದ್ಧ ೪-೧ ಅಂತರದಲ್ಲಿ ಗೆಲುವು ಸಾಧಿಸಿದರೆ, ೫೪ ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಸಾಕ್ಷಿ ಅಮೆರಿಕದ ಯಾಸ್ಲಿನ್ ಪೆರೆಜ್ ವಿರುದ್ಧ ಗೆಲುವು ಸಾಧಿಸಿದರು. ೮೦ ಕೆ.ಜಿ. ವಿಭಾಗದಲ್ಲಿ ನೂಪುರ್ ಕಜಕಿಸ್ತಾನ್‌ನ ಯೆಲ್ದಾನಾ ತಾಲಿಪೊವ ವಿರುದ್ಧ ೫-೧ ಅಂತರದಲ್ಲಿ ಗೆಲುವು ಸಾಧಿಸಿ ಸ್ವರ್ಣ ಪದಕ ತಮ್ಮದಾಗಿಸಿಕೊಂಡರು.

><><><><><><><><><><

ಲಂಡನ್‌ನಲ್ಲಿ ನಡೆಯುತ್ತಿರುವ ವಿಂಬಲ್ಡನ್ ಗ್ರ್ಯಾಂಡ್ ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಇಂದು ಸಂಜೆ ನಡೆಯಲಿರುವ ಪುರುಷರ ಡಬಲ್ಸ್ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ ಭಾರತದ ಯೂಕಿ ಭಾಂಬ್ರಿ ಮತ್ತು ಅಮೆರಿಕದ ರಾಬರ್ಟ್ ಗ್ಯಾಲೋವೇ ಜೋಡಿ ಕಣಕ್ಕಿಳಿಯಲಿದೆ. ಅವರು, ಸ್ಪೇನ್‌ನ ಮಾರ್ಕೆಲ್ ಗ್ರಾನೊಲರ್ಸ್ ಮತ್ತು ಅರ್ಜೆಂಟಿನಾದ ಹೊರ್‍ಯಾಸಿಯೊ ಝೆಬೆಲೊಸ್ ಜೋಡಿಯನ್ನು ಎದುರಿಸಲಿದ್ದಾರೆ. ಈ ನಡುವೆ, ಪುರುಷರ ವೈಯಕ್ತಿಕ ವಿಭಾಗದಲ್ಲಿ ಹಾಲಿ ಚಾಂಪಿಯನ್ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮತ್ತು ಮಹಿಳಾ ವಿಭಾಗದಲ್ಲಿ ಅರಿನಾ ಸಬಲೆಂಕಾ ಕ್ವಾರ್ಟರ್ ಫೈನಲ್ ತಲುಪಿದ್ದಾರೆ.

><><><><><><><><><><